ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ

1) ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಹುಳು ಸಾಕಣೆ ಸಲಕರಣೆಗಳ ಸರಬರಾಜು.

2) ರೇಷ್ಮೆ ಹುಳು ಸಾಕಾಣೆ ಮನೆಗೆ ಶೇಕಡ 75 ಭಾಗ ಸಹಾಯಧನ.

3) ಊಜಿ ನಿಯಂತ್ರಣಕ್ಕಾಗಿ ಊಜಿ ಪರದೆಗಳ ಸರಬರಾಜು.

ವಿಷಯ : ವಿರಾಜಪೇಟೆ ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ.

1418 (1897)–ಶ್ರೀ ಬಸವರಾಜ್. ಹೆಚ್. ಡಿ. (ವಿರಾಜಪೇಟೆ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಎಷ್ಟು ಪ್ರದೇಶಗಳಲ್ಲಿ ಗಣಿಗಾರಿಕೆ ಮಾಡಲು ಪರವಾನಗಿ ನೀಡಲಾಗಿದೆ?

ಆ) ವಿರಾಜಪೇಟೆ ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಅಕ್ರಮ ಗಣಿಗಾರಿಕೆ ಮಾಡುತ್ತಿರುವವರ ಮೇಲೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಸ್. ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು.)

ಅ) 19 ಪ್ರದೇಶದಲ್ಲಿ ಕಲ್ಲು ಗಣಿಗುತ್ತಿಗೆಗಳನ್ನು ನೀಡಲಾಗಿದೆ.

ಆ) ಬಂದಿದೆ.

ಇ) ಆಗಿಂದಾಗ್ಗೆ ತನಿಖೆಗಳನ್ನು ನಡೆಸಿ ನಿಯಮಾನುಸಾರ ದಂಡ ವಿಧಿಸಿ ಗಣಿಗಾರಿಕೆಯನ್ನು ಸಕ್ರಮಗೊಳಿಸಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗುತ್ತದೆ.